# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಎನ್.ರವಿಕುಮಾರ್ ಹಾಗೂ ಶ್ರೀ ಕೆ.ಎಸ್.ನವೀನ್ ಅವರುಗಳು ನಿಯಮ 330ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

*********

**ಪ್ರಶ್ನೆ:-**

ವಕ್ಫ್ ಬೋರ್ಡ್ ವತಿಯಿಂದ ಯಾವುದೇ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಘೋಷಿಸಲು ಬೇಕಾಗುವ ಕನಿಷ್ಠ ದಾಖಲೆಗಳು ಅವು ಯಾವ ಸ್ವರೂಪದಲ್ಲಿರಬೇಕು ಎಂಬುದರ ಕುರಿತು ಹಾಗೂ ರಾಜ್ಯದಲ್ಲಿ ವಕ್ಫ್ ಬೋರ್ಡ್ ಹೊಂದಿರುವ ಸಮಗ್ರ ಆಸ್ತಿಯ ವಿವರ ಸದರಿ ಆಸ್ತಿಯನ್ನು ಯಾರು ಯಾವಾಗ ವಕ್ಫ್ ಬೋರ್ಡ್‌ಗೆ ದಾನ ನೀಡಿರುವ ಕುರಿತು ಚರ್ಚಿಸಲು ಅನುಮತಿಸುವಂತೆ ಕೋರಿದೆ.

**ಉತ್ತರ:-**

ವಕ್ಫ್ ಕಾಯ್ದೆ 1995 ರ ಅಡಿಯಲ್ಲಿ ವಕ್ಫ್ ಆಸ್ತಿಗಳ ನೋಂದಣಿಗಾಗಿ ಅಥವಾ ವಕ್ಫ್ ಆಸ್ತಿ ಎಂದು ಘೋಷಿಸಲು ಈ ಕೆಳಗಿನ ದಾಖಲೆಗಳು ಮತ್ತು ಮಾಹಿತಿ ಅವಶ್ಯಕವಾಗಿರುತ್ತವೆ.

1. **ವಕ್ಫ್ ಡೀಡ್:** ಧಾರ್ಮಿಕ ಅಥವಾ ದತ್ತಿ ಉದ್ದೇಶಗಳಿಗಾಗಿ ಆಸ್ತಿಯ ಸಮರ್ಪಣೆಯನ್ನು ಘೋಷಿಸುವ ಸಹಿ ಮಾಡಿದ ದಾಖಲೆ.
2. **ಹಕ್ಕು ಪತ್ರ (Title Deed):** ಮಾಲೀಕತ್ವವನ್ನು ಸಾಬೀತುಪಡಿಸಲು ಆಸ್ತಿಯ ಹಕ್ಕು ಪತ್ರದ ಪ್ರತಿ.
3. **ಮಾಲೀಕತ್ವದ ಪುರಾವೆ:** ಆಸ್ತಿಯನ್ನು ಸಮರ್ಪಿಸುವ ವ್ಯಕ್ತಿಯು ಸರಿಯಾದ ಮಾಲೀಕ ಎಂದು ದೃಢೀಕರಿಸುವ ದಾಖಲೆಗಳು.
4. **ಆಸ್ತಿ ವಿವರಗಳು:** ಆಸ್ತಿಯ ಸ್ಥಳ, ಗಾತ್ರ ಚಕ್ಕಬಂದಿ ಪ್ರಕಾರ (ಭೂಮಿ, ಕಟ್ಟಡ ಇತ್ಯಾದಿ) ಮತ್ತು ಅದರ ಉದ್ದೇಶಿತ ಬಳಕೆಯ ಬಗ್ಗೆ ಮಾಹಿತಿ.
5. **ಸರ್ವೇ ವರದಿ:** ಆಸ್ತಿಯ ಚಕ್ಕಬಂದಿ, ಪ್ರದೇಶ ಮತ್ತು ವಿವರಣೆಯನ್ನು ವಿವರಿಸುವ ವರದಿ.

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಮಸೀದಿಗಳು, ದರ್ಗಾ, ಖಬರಸ್ಥಾನ್, ಆಶುರ್‌ಖಾನಾ ಈದ್ಗಾಗಳು ಇತರೆ ಆಸ್ತಿಗಳು ಸೇರಿದಂತೆ ಒಟ್ಟು 47629 ನೋಂದಾಯಿತ ವಕ್ಫ್ ಆಸ್ತಿಗಳನ್ನು ಹೊಂದಿರುತ್ತದೆ. ಸದರಿ ಆಸ್ತಿಗಳು ವಕ್ಫ್ ಕಾಯ್ದೆ 1954 ರ ಕಲಂ 4 ರಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೇಮಿಸಿದ್ದಂತಹ ಸರ್ವೇ ಆಯುಕ್ತರ ಮತ್ತು ಸಹಾಯಕ ಸರ್ವೇ ಆಯುಕ್ತರ ಮೇಲ್ವಿಚಾರಣೆಯಲ್ಲಿ ಸರ್ವೇ ಕಾರ್ಯ ನಡೆದಿದ್ದು ಅವರು ಸಲ್ಲಿಸಿದಂತಹ ವಕ್ಫ್ ಆಸ್ತಿಗಳ ಸರ್ವೇ ವರದಿಯನ್ನು ಆಧರಿಸಿ ಕಲಂ 5 ರಡಿಯಲ್ಲಿ ರಾಜ್ಯಪತ್ರದಲ್ಲಿ ವಕ್ಫ್ ಆಸ್ತಿಗಳಾಗಿ ಅಧಿಸೂಚನೆ ಹೊರಡಿಸಲಾಗಿರುತ್ತದೆ, ಈ ಆಸ್ತಿಗಳು ಸ್ವತಂತ್ರ ಪೂರ್ವದಿಂದ ಇನಾಂ, ದಾನ ಹಾಗೂ ಗ್ರ್ಯಾಂಟ್ ರೂಪದಲ್ಲಿ ಮತ್ತು ತಲೆತಲಾಂತರದಿಂದ (ಮಸೀದಿ, ದರ್ಗಾ, ಖಬರಸ್ತಾನ್, ಆಶೂರಖಾನಾ, ಮುಸಾಫಿರ್‌ಖಾನಾ ಅನಾಥಾಶ್ರಮ ಮತ್ತು ಇತರೆ ಧಾರ್ಮಿಕ್ ಸ್ಥಳಗಳು) ರೂಢಿಗತವಾಗಿ ಬಳಕೆ ಆಗುತ್ತಿರುವ ಆಸ್ತಿಗಳು ವಕ್ಫ್ ಆಸ್ತಿಗಳಾಗಿರುತ್ತವೆ.

ಮುಂದುವರೆದು ವಕ್ಫ್ ಮಂಡಳಿಯಲ್ಲಿ ದಾನಿಗಳು ದಾನದ ರೂಪದಲ್ಲಿ ನೀಡುತ್ತಿರುವ ಆಸ್ತಿಗಳು ಮತ್ತು ವಕ್ಫ್ ಸ್ವರೂಪ ಹೊಂದಿರುವ ಆಸ್ತಿಗಳನ್ನು ನೋಂದಾಯಿಸುವ ಕಾರ್ಯವು ಕಾಲಾನುಕಾಲದಿಂದ ನಿರಂತರ ಜಾರಿಯಲ್ಲಿರುತ್ತದೆ.

ಕಡತ ಸಂಖ್ಯೆ: MWD 274 LMQ 2024

B. Zameer

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು